## ವಿದ್ಯಾರ್ಥಿಪ್ರಭ

### ಮೆಡಲ್‌ಗಿಂತ ಹೆಚ್ಚಿನದು ಯಾವುದು?

**ಬೇ**ಸಿಗೆ ರಜಾ ಇನ್ನೇನು ಮುಗಿಯುವುದರಲ್ಲಿದೆ. ಪ್ರತಿದಿನದಂತೆ ಇಂದೂ ಆ ತಾತನ ಸುತ್ತಲೂ ಹುಡುಗರು ಹುಡುಗಿಯರೂ ಸೇರಿದ್ದಾರೆ. ಪ್ರತಿ ಸಂಜೆಯೂ ಅವನು ಅವರಿಗೆ ಅನೇಕ ಕಥೆಗಳನ್ನು ಹೇಳುತ್ತಾನೆ. ಯೋಧರ ಕಥೆಗಳು. ಯುದ್ಧದ ಕಥೆಗಳು. ಚಂದ್ರನ ಕಥೆ, ತಾರೆಗಳ ಕಥೆ. ದೇವತೆಗಳು ರಾಕ್ಷಸರ ಕಥೆ – ಇವೆಲ್ಲವನ್ನೂ ಹೇಳುತ್ತಾನೆ. ಅವತ್ತು ರಜಾದಿನಗಳ ಕಡೆಯ ದಿನ. ಮರುದಿನ ಮಕ್ಕಳೆಲ್ಲ ನಗರದ ತಮ್ಮ ಮನೆಗಳಿಗೆ ಹೋಗುತ್ತಾರೆ.

ತಾತ ಯೌವನದ ದಿನಗಳಲ್ಲಿ ಸಣ್ಣಕಥೆಗಳ ಬರಹಗಾರನಾಗಿದ್ದನಂತೆ. ಇವತ್ತು ಅವನು ತನ್ನ ಸುತ್ತಲೂ ಕುಳಿತಿರುವ ಮಕ್ಕಳಿಗೆ ಹೇಳುತ್ತಾನೆ: "ನೋಡಿ ಮಕ್ಕಳೇ, ನಿಮ್ಮನ್ನು ನಾನು ನೋಡುವುದು ಮುಂದಿನ ವರ್ಷದ ರಜಾಸಮಯದಲ್ಲಿಯೇ. ನನ್ನನ್ನು ದೇವರು ಯಾವಾಗ ಕರೆದುಕೊಳ್ಳುವನೋ ತಿಳಿಯದು. ನಾನು ಹಲವು ವರ್ಷಗಳ ಹಿಂದೆ ಪುಸ್ತಕವೊಂದನ್ನು ಬರೆದಿದ್ದೆ. ಸಣ್ಣಕಥೆಗಳ ಪುಸ್ತಕ ಅದು. ಅದು ಇನ್ನೂ ಪ್ರಕಟವಾಗಿಲ್ಲ. ನೀವು ದೊಡ್ಡವರಾದಾಗ, ಮಹಾನ್ ವ್ಯಕ್ತಿಗಳಾಗಬೇಕು. ನೀವು ಮಹಾನ್ ವ್ಯಕ್ತಿಗಳಾಗುವಂತೆ ಮಾಡುವುದು ಏನು ಗೊತ್ತೇನು? **ನೀವು ನಿಮ್ಮ ಹೃದಯವನ್ನು ವಿಶಾಲಗೊಳಿಸಿಕೊಳ್ಳಬೇಕು. ಇಡೀ ಜಗತ್ತನ್ನೇ ಅಪ್ಪಿಕೊಳ್ಳಬೇಕು.** ಇವತ್ತು ಅದಕ್ಕೆ ಸಹಾಯಮಾಡುವಂತಹ ಕೆಲವು ಕಥೆಗಳನ್ನು ನಿಮಗೆ ನಾನು ಓದಿ ಹೇಳುತ್ತೇನೆ."

ಅಂದು ತಾತನ ಧ್ವನಿಯಲ್ಲಿ ಏನೋ ಒಂದು ವಿಶೇಷತೆ ಇತ್ತು. ಅವನು ಓದುತ್ತಿದ್ದ ಕಥೆಗಳು ಕೇಳುತ್ತಿದ್ದ ಮಕ್ಕಳ ಮೃದು ಮನಸ್ಸುಗಳಲ್ಲಿ ಇದುವರೆಗೂ ಅರಿವಾಗದಿದ್ದ ಭಾವನೆಗಳನ್ನು ಉಂಟು ಮಾಡಿದವು. ಅವರಲ್ಲಿ ಹೊಸ ಭರವಸೆಗಳನ್ನು ಹುಟ್ಟುಹಾಕಿದವು. ಅವರಲ್ಲಿ ಹೊಸ ಕನಸುಗಳನ್ನು ಮೂಡಿಸಿದವು. "ನಾನೂ ಈ ಎಲ್ಲ ಗುಣಗಳನ್ನು ನನ್ನ ಜೀವನದಲ್ಲಿ ತಂದುಕೊಳ್ಳಬೇಕು" ಎನ್ನುವಂತೆ ಮಾಡಿದವು.

ಮೊದಲನೆಯ ಕಥೆ ಹೀಗಿತ್ತು: ನಿತಿನ್ ಹೈಸ್ಕೂಲ್‌ನಲ್ಲಿ ಓದುತ್ತಿದ್ದ. ಅಥ್ಲೆಟಿಕ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ. ಅವನಿಗೆ ಕಾತರವೋ ಕಾತರ. ಅವನ ತಂದೆ ತಾಯಿಗಳು ಸ್ಟ್ಯಾಂಡಿನಲ್ಲಿ ನಿಂತು ನೋಡುತ್ತಿದ್ದರು. ಅವನು ಓಡಿದ. ಮೊದಲ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡ. ಜನರೆಲ್ಲ ಹೋ ಹೋ ಎಂದು ಪ್ರಶಂಸಿಸುತ್ತಿದ್ದರು. ತುಂಬ ಸಂತೋಷವಾಯಿತು ನಿತಿನ್‌ಗೆ.

ನಂತರ ಎರಡನೇ ಸ್ಪರ್ಧೆ ಆರಂಭವಾಯಿತು. ಅದರಲ್ಲೂ ಅವನೇ ಮೊದಲು. ಇನ್ನೇನು ಗುರಿ ಮುಟ್ಟಿದ್ದಾನೆ. ಯಾತಕ್ಕೋ ಏನೋ ನಿಂತುಬಿಟ್ಟ. ಟ್ರ್ಯಾಕಿನಿಂದ ಸರಿದುಬಿಟ್ಟ. ಅಪ್ಪ ಅಮ್ಮ ಮೃದುವಾಗಿ ಕೇಳಿದರು: "ಏಕಪ್ಪಾ ಹೀಗೆ ಮಾಡಿದೆ, ನಿತಿನ್? ನೀನು ಓಡಿದ್ದರೆ, ಇದರಲ್ಲೂ ಮೊದಲನೆಯವನಾಗುತ್ತಿದ್ದೆಯಲ್ಲೋ?" ಆಗ ನಿತಿನ್ ಹೇಳಿದ: ಅಮ್ಮಾ ಅಪ್ಪಾ, ನನಗಾಗಲೇ ಒಂದು ಮೆಡಲ್ ಬಂದಿದೆಯಲ್ಲಾ. ಆದರೆ, ನನ್ನ ಸ್ನೇಹಿತ ಸಂತೋಷ್, ಅವನಿಗೆ ಇನ್ನೂ ಒಂದೂ ಮೆಡಲ್ ಬಂದಿರಲಿಲ್ಲ. ಅದಕ್ಕೆ ಅವನಿಗೆ ಮೆಡಲ್ ಸಿಗಲಿ ಅಂತ..." ನಿತಿನ್‌ನ ತಂದೆತಾಯಿಗಳ ಕಣ್ಣು ಹನಿಗೂಡಿದವು. ಅವರು ಮಗನನ್ನು ಬಾಚಿ ತಬ್ಬಿಕೊಂಡರು.

ತಾತ ಹೇಳಿದ: **"ನೋಡಿದಿರಾ ಮಕ್ಕಳೆ, ಇನ್ನೊಬ್ಬರ ಸಂತೋಷದಲ್ಲಿ ನಾವು ಸಂತೋಷಪಡಬೇಕು. ಇದನ್ನೇ ಹೃದಯವಂತಿಕೆ ಎಂದು ಕರೆಯುವುದು"** ನಂತರ ತನ್ನ ಪುಸ್ತಕದಲ್ಲಿರುವ ಇನ್ನೊಂದು ಕಥೆ ಓದಲು ಆರಂಭಿಸಿದ:

ಜಯರಾಮ ಎಲ್ಲ ವಿಧದಲ್ಲೂ ಒಳ್ಳೆಯ ಹುಡುಗ. ಒಳ್ಳೆ ಅಂಕಗಳನ್ನು ಪಡೆದುಕೊಳ್ಳುತ್ತಿದ್ದ, ವಿನಯವಂತ, ವಿಧೇಯನಾಗಿ ನಡೆದುಕೊಳ್ಳುತ್ತಿದ್ದ. ಆದರೆ, ಅವನ ಮುಖ ಮಾತ್ರ ನೋಡುವ ಹಾಗಿರಲಿಲ್ಲ. ಅದು ಅಷ್ಟೊಂದು ಕುರೂಪವಾಗಿತ್ತು. ಅವನ ಸ್ನೇಹಿತರು ಅದನ್ನೇ ಆಡಿಕೊಳ್ಳುತ್ತಿದ್ದರು. ಹಾಸ್ಯಮಾಡುತ್ತಿದ್ದರು. ಜಯರಾಮ ಹೇಳಿಕೊಳ್ಳಲಾಗದ ದುಃಖವನ್ನು ಅನುಭವಿಸುತ್ತಿದ್ದ.

ಇದನ್ನು ಗಮನಿಸಿದ ಮೇಷ್ಟು ಒಂದು ದಿನ ತರಗತಿಯಲ್ಲಿ ಹೀಗೆ ಹೇಳಿದರು: "ಮಕ್ಕಳೆ, ಇಲ್ಲಿ ಕೇಳಿಸಿಕೊಳ್ಳಿ. ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಸೌಂದರ್ಯ ಇರುತ್ತದೆ. ಇದು ಸುಂದರವಾಗಿದೆ, ಇದು ಇಲ್ಲ – ಎಂದು ಹೇಳುತ್ತೇವಲ್ಲ, ಅದು ಸೌಂದರ್ಯವನ್ನು ಕಾಣುವ ಸರಿಯಾದ ಬಗೆ ಅಲ್ಲ. ಅದಕ್ಕೇ ನಿಮಗೆ ಜಯರಾಮನ ಮುಖದಲ್ಲಿ ಸೌಂದರ್ಯವನ್ನು ನೋಡಲು ಸಾಧ್ಯವಾಗಿಲ್ಲ. ನೀವು ಅವನ ಕಡೆ ನೋಡಿದಾಗ, ಅವನೊಡನೆ ಮಾತನಾಡುವಾಗ, ಒಂದು ಸಂಗತಿಯನ್ನು ಮರೆಯಲೇಬಾರದು. ಅದೇನು ಗೊತ್ತೆ? **ನಿಮ್ಮಂತೆಯೇ ಅವನನ್ನೂ ಭಗವಂತನೇ ಸೃಷ್ಟಿಸಿದ್ದಾನೆ. ಭಗವಂತನ ಸೃಷ್ಟಿಯಲ್ಲಿ ದೋಷವನ್ನು ಕಾಣಬಾರದು.** ಅಲ್ಲವೇ, ಮಕ್ಕಳೆ. ಭಗವಂತನು ಅವನನ್ನು ಹಾಗೆ ಸೃಷ್ಟಿಸಿರುವುದರಲ್ಲಿ ಏನೋ ಒಂದು ಉದ್ದೇಶ ಇರಬಹುದು. ಅದು ನಮಗೆ ಗೊತ್ತಿಲ್ಲದಿರಬಹುದು. ಇದನ್ನು ನೀವು ತಿಳಿದುಕೊಂಡರೆ, ಅವನು ನಿಮ್ಮ ಆತ್ಮೀಯ ಗೆಳೆಯನಾಗುತ್ತಾನೆ. ಆಗ ಅವನನ್ನು ಇಷ್ಟಪಡಲು, ಪ್ರೀತಿಸಲು ಆರಂಭಿಸುತ್ತೀರಿ. ಒಂದು ಸಲ ಅವನನ್ನು ನೀವು ಪ್ರೀತಿಸಲು ಆರಂಭಿಸಿದಿರಿ ಎಂದುಕೊಳ್ಳಿ, ಅವನ ಮುಖದಲ್ಲಿ ನಿಮಗೆ ಏನೂ ವ್ಯತ್ಯಾಸ ತೋರುವುದಿಲ್ಲ."

ಕೆಲವು ಬಾಲಕರು, ಈ ಮಾತುಗಳ ಪ್ರಕಾರ, ಜಯರಾಮನೊಡನೆ ವ್ಯವಹರಿಸಲು ಆರಂಭಿಸಿದರು. ಆದರೆ ಮತ್ತೆ ಕೆಲವರು ಹಿಂದಿನ ರೀತಿಯಲ್ಲಿಯೆ ಕೀಟಲೆ ಮಾಡುತ್ತಿದ್ದರು. ಜಯರಾಮನಿಗೆ ನಿಜಕ್ಕೂ

> ನಮ್ಮ ಹಿತವನ್ನೇ ಕುರಿತು ಆಲೋಚಿಸುವ ಸ್ವಾರ್ಥವೇ ಮಹಾ ಪಾಪ. ಯಾರು 'ನಾನು ಮೊದಲು ಊಟ ಮಾಡುತ್ತೇನೆ! ಇತರರಿಗಿಂತ ಹೆಚ್ಚು ಸಂಪತ್ತನ್ನು ನಾನು ಇಟ್ಟುಕೊಳ್ಳುತ್ತೇನೆ! ನಾನೇ ಎಲ್ಲವನ್ನು ತೆಗೆದುಕೊಳ್ಳುತ್ತೇನೆ! ಇತರರಿಗಿಂತ ಮುಂಚೆ ನಾನು ಸ್ವರ್ಗಕ್ಕೆ ಹೋಗುತ್ತೇನೆ! ನಾನು ಮೊದಲು ಮುಕ್ತಿ ಗಳಿಸುತ್ತೇನೆ' ಎಂದು ಯೋಚಿಸುವರೋ ಅವರೇ ಸ್ವಾರ್ಥಿಗಳು. ನಿಸ್ವಾರ್ಥಿಗಳು: 'ನಾನೇ ಕೊನೆಯಲ್ಲಿರುವೆನು, ನನಗೆ ಸ್ವರ್ಗದ ಇಚ್ಛೆಯಿಲ್ಲ. ನರಕಕ್ಕೆ ಹೋಗುವುದರಿಂದ ಇತರರಿಗೆ ನಾನು ಸಹಾಯಮಾಡುವಂತೆ ಇದ್ದರೆ ನಾನು ಅದಕ್ಕೆ ಸಿದ್ಧನಾಗಿರುವೆನು' ಎನ್ನುವರು. ಈ ನಿಸ್ವಾರ್ಥವೇ ಧರ್ಮದ ಪರೀಕ್ಷೆ. ಯಾರಲ್ಲಿ ಈ ನಿಸ್ವಾರ್ಥ ಹೆಚ್ಚು ಇದೆಯೋ ಅವನು ಹೆಚ್ಚು ಧಾರ್ಮಿಕ, ಅವನು ಶಿವನ ಸಮೀಪದಲ್ಲಿರುವನು.
>
> – ಸ್ವಾಮಿ ವಿವೇಕಾನಂದ. (ಕೃ.ಶ್ರೇ. [illegible])

ತುಂಬ ಸಂಕಟವಾಗುತ್ತಿತ್ತು. ಆದರೆ, ಅವನು ಅಸಹಾಯಕನಾಗಿದ್ದ.

ಒಂದು ದಿನ ಜಯರಾಮ ಅಂಗಡಿಗೆ ಹೋದ. ರಸ್ತೆಯ ಮೇಲೆ ಒಂದು ಚಿಕ್ಕ ಕನ್ನಡಿ ಬಿದ್ದಿರುವುದನ್ನು ಕಂಡ. ಅಲ್ಲಿ ತನ್ನ ಮುಖ ನೋಡಿಕೊಂಡ. ಆಶ್ಚರ್ಯ! ಅವನ ಮುಖ ಸುಂದರವಾಗಿ ಕಾಣಿಸುತ್ತಿದೆ! ಅಂಗಡಿಯವನನ್ನು ಹೀಗೇಕೆ ಎಂದು ಕೇಳಿದ. ಅದೊಂದು ದೋಷಪೂರಿತ ಕನ್ನಡಿ ಎಂದ ಅವನು. ಕನ್ನಡಿ ಚೆನ್ನಾಗಿಲ್ಲದಿದ್ದರೆ, ಅದರ ಪ್ರತಿಫಲನ ಚೆನ್ನಾಗಿರುವುದಿಲ್ಲ. ಅದು ಸುಂದರವಾದ ಮುಖವನ್ನು ವಿರೂಪ ಮಾಡಿ ತೋರಿಸುತ್ತದೆ. ಆದರೆ ಜಯರಾಮನಂತಹ ವಿರೂಪ ಮುಖ ಅದರಲ್ಲಿ ಸುಂದರವಾಗಿ ಕಾಣಿಸುತ್ತದೆ!! ಜಯರಾಮ ಅದನ್ನು ಮನೆಗೊಯ್ದ. ಮತ್ತೆ ಮತ್ತೆ ಅದರಲ್ಲಿ ತನ್ನ ಮುಖ ನೋಡಿಕೊಂಡ. ಬೇರೆ ಹುಡುಗರು ಹೇಳುವಷ್ಟು ಕುರೂಪಿಯೇನೂ ನಾನು ಅಲ್ಲ ಎಂದು ನಿಧಾನವಾಗಿ ಅವನಿಗೆ ಅನ್ನಿಸತೊಡಗಿತು. ಅವನು ಸ್ವಲ್ಪಸ್ವಲ್ಪವೇ ಆತ್ಮವಿಶ್ವಾಸ ಬೆಳೆಸಿಕೊಳ್ಳುತ್ತ ಹೋದ.

ಇತರರು ತನ್ನ ಬಗ್ಗೆ ಏನು ಹೇಳುತ್ತಾರೆ ಅನ್ನುವುದನ್ನು ಗಮನಿಸುವುದನ್ನು ಅಂದಿನಿಂದ ಬಿಟ್ಟುಬಿಟ್ಟ. ಅದನ್ನು ನೋಡಿ, ಇತರರೂ ಅವನನ್ನು ಟೀಕಿಸುವುದನ್ನು ಕಡಮೆ ಮಾಡಿದರು.

ಇದೇ ನಿಯಮ: **ನಾವು ನಮ್ಮಲ್ಲಿ ಯಾವ ಗುಣಗಳು ಇವೆಯೆಂದು ನಂಬುತ್ತೇವೆಯೋ ಅದನ್ನೇ ಇತರರರೂ ನಮ್ಮಲ್ಲಿ ನೋಡುತ್ತಾರೆ.**

ಅಷ್ಟು ಹೊತ್ತಿಗೆ ಸೂರ್ಯ ಮುಳುಗಿದ್ದ. ಸುತ್ತಲೂ ಕತ್ತಲಾಗಿತ್ತು. ಆದರೆ ಯಾರಿಗೂ ದೀಪ ಹಚ್ಚಬೇಕು ಎಂದು ಅನ್ನಿಸಲೇ ಇಲ್ಲ. ಎಲ್ಲರೂ ಆ ತಾತನ ಮಾತುಗಳಲ್ಲಿದ್ದ ಜ್ಞಾನಜ್ಯೋತಿಯಿಂದ ತಮ್ಮ ಹೃದಯಗಳನ್ನು ಬೆಳಗಿಸಿಕೊಳ್ಳುವುದರಲ್ಲೇ ತಲ್ಲೀನರಾಗಿ ಹೋಗಿದ್ದರು. ಆ ತಾತನಿಗೆ ಕತ್ತಲೆಯಲ್ಲಿ ಕಥೆ ಓದಲು ಹೇಗೆ ಸಾಧ್ಯವಾಗುತ್ತಿತ್ತು? ಇಲ್ಲ, ಇಲ್ಲ. ಅವನೇನೂ ಪುಸ್ತಕದಿಂದ ಓದಿಹೇಳಬೇಕಾಗಿರಲಿಲ್ಲ. ನಿಜವಾಗಿ ಅವನ ಪುಸ್ತಕ ಇದ್ದುದು ಅವನ ಮನಸ್ಸಿನಲ್ಲಿ. ಅವನ ಮನಸ್ಸಿನ ತುಂಬ ಬೆಳಕೋ ಬೆಳಕು. ಈಗ ಸುತ್ತಲೂ ಸೇರಿದ್ದ ಹುಡುಗರು ಅವನ ಧ್ವನಿಯನ್ನು ಮಾತ್ರ ಕೇಳುತ್ತಿದ್ದರು. ಮುಖ ನೋಡಲು ಆಗುತ್ತಿರಲಿಲ್ಲ. ಆದರೆ, ಅಲ್ಲೊಂದು ಸುಂದರ ವಾತಾವರಣ ನಿರ್ಮಾಣವಾಗಿತ್ತು. ತಾತನ ಮಾತುಗಳು ಮಕ್ಕಳ ಹೃದಯವನ್ನು ನೇರವಾಗಿ ತಟ್ಟುತ್ತಿತ್ತು.

**ಮಾತುಗಳು ಮುಂದುವರೆದವು: "ಮಕ್ಕಳೆ, ಯಾವಾಗಲೂ ಸಮಗ್ರ ದೃಷ್ಟಿಯಿಂದ ಈ ಜಗತ್ತನ್ನು ನೋಡಿರಿ. ಬಿಡಿಬಿಡಿಯಾಗಿ ನೋಡಬೇಡಿ. ಆಗ ಮಾತ್ರ ನೀವು ಎಲ್ಲ ಸಂಗತಿಗಳನ್ನೂ ಅವು ಹೇಗಿದೆಯೋ ಹಾಗೆ ತಿಳಿದುಕೊಳ್ಳುವಿರಿ. ಇಡಿಯಾಗಿ ನೋಡುವುದು, ಸಮಗ್ರವಾಗಿ ನೋಡುವುದು ಎಂದರೆ, ಏನು ಗೊತ್ತೆ, ಮಕ್ಕಳೆ? ನಿಮ್ಮ ಹೃದಯವನ್ನು ತೆರೆದಿಟ್ಟು ನೋಡುವುದು. ಬೇರೊಬ್ಬರ ಕಷ್ಟದಲ್ಲಿ ನಿಮ್ಮ ಕಷ್ಟವನ್ನು ಭಾವಿಸಿ ನೋಡುವುದು. ಬೇರೊಬ್ಬರ ಸುಖದಲ್ಲಿ ನಿಮ್ಮ ಸುಖವನ್ನು ಕಾಣುವುದು. ಬಸವಣ್ಣನೆಂದಂತೆ, 'ಇವನಾರವ, ಇವನಾರವ ಎಂದು ನೋಡದೆ, ಇವ ನಮ್ಮವ ಇವ ನಮ್ಮವ' ಎಂದುಕೊಂಡು ಎಲ್ಲರನ್ನೂ ನಮ್ಮವರೆಂದು ಭಾವಿಸುವುದು."**

ಮಕ್ಕಳೆ, ನಿಮಗೆ ಗೊತ್ತೆ? ಶ್ರೀರಾಮಕೃಷ್ಣರು ಒಮ್ಮೆ ತೀರ್ಥಯಾತ್ರೆಗೆ ಹೋಗುತ್ತಿದ್ದರು. ಒಂದು ಕಡೆ ಅನೇಕ ಬಡವರನ್ನು ಕಂಡರು. ತಮ್ಮನ್ನು ಕರೆದುಕೊಂಡು ಬಂದಿದ್ದ, ಶ್ರೀಮಂತ ಭಕ್ತನಿಗೆ "ಅವರಿಗೆಲ್ಲ ಹೊಟ್ಟೆ ತುಂಬ ಊಟ, ಹೊದೆಯಲು ಬಟ್ಟೆ, ತಲೆಗೆ ಹಚ್ಚಿಕೊಳ್ಳಲು ಎಣ್ಣೆ ಕೊಡು. ಇಲ್ಲದಿದ್ದರೆ, ನಾನು ಮುಂದೆ ನಿನ್ನ ಜತೆ ಬರುವುದೇ ಇಲ್ಲ. ಇವರೊಡನೆಯೇ ಕುಳಿತುಬಿಡುತ್ತೇನೆ" ಎಂದು ಹಠ ಮಾಡಿದರು. ಇದು ಹೃದಯವಂತಿಕೆ.

ಶ್ರೀಮಾತೆ ಶಾರದಾದೇವಿಯವರು ಒಮ್ಮೆ ಒಬ್ಬ ಭಕ್ತ ಮಹಿಳೆಗೆ ಹೇಳಿದರು: "ಮಗಳೇ, ನಿನಗೆ ಶಾಂತಿ ಬೇಕಾದರೆ ಯಾರಲ್ಲೂ ದೋಷ ನೋಡಬೇಡ. ಎಲ್ಲರೂ ನಿನ್ನವರೇ. ಯಾರೂ ನಿನಗೆ ಅಪರಿಚಿತರಲ್ಲಮ್ಮಾ. ಇಡೀ ವಿಶ್ವವೇ ನಿನ್ನದು." ಇದು ಹೃದಯವಂತಿಕೆ.

ಸ್ವಾಮಿ ವಿವೇಕಾನಂದರು ಒಮ್ಮೆ ತಮ್ಮ ಸಹೋದರ ಸಂನ್ಯಾಸಿಯೊಬ್ಬರನ್ನು ಅಪ್ಪಿಕೊಂಡು ಗಳಗಳ ಕಣ್ಣೀರು ಸುರಿಸಿದರು. "ತಮ್ಮಾ, ದಿನದಿನಕ್ಕೂ ನನಗೆ ಪ್ರೀತಿ, ಅನುಕಂಪ ಜಾಸ್ತಿಯಾಗುತ್ತ ಇದೆ. ಎಲ್ಲರನ್ನೂ ಸಮಾನರೆಂದು ನೋಡುವ ಭಾವನೆ ಬೆಳೆಯುತ್ತಿದೆ. ಇದೇ ನಿನ್ನ ಧರ್ಮವಾದರೆ, ನಿಜವಾಗಲೂ ನಾನು ಧಾರ್ಮಿಕನಾಗುತ್ತಿದ್ದೇನೆ" ಎಂದು ಮನದುಂಬಿ ನುಡಿದರು. ಇದು ಹೃದಯವಂತಿಕೆ.

ಶ್ರೀರಾಮಕೃಷ್ಣರ ಒಬ್ಬರು ಶಿಷ್ಯರಿದ್ದರು. ಅವರ ಹೆಸರು ಅಖಂಡಾನಂದಜಿ ಎಂದು. ಅವರ ಆಶ್ರಮದಲ್ಲಿ ಬಡ ಅನಾಥ ಮಕ್ಕಳನ್ನು ಸಾಕುತ್ತಿದ್ದರು. ಅವರಿಗೆ ತಾವೇ ಸ್ವತಃ ಸ್ನಾನ ಮಾಡಿಸುತ್ತಿದ್ದರು. ಸ್ನಾನ ಮಾಡಿಸುವಾಗ, ದೇವರಿಗೆ ಪೂಜೆ ಸಮಯದಲ್ಲಿ ಅಭಿಷೇಕ ಮಾಡಿಸುವಾಗ ಹೇಳುವ ಮಂತ್ರವನ್ನು ಗಟ್ಟಿಯಾಗಿ ಹೇಳುತ್ತಿದ್ದರು. ಮಕ್ಕಳೇ ದೇವರು ಎಂದುಕೊಂಡಿದ್ದರು. ಇದು ಹೃದಯವಂತಿಕೆ.

ಹೃದಯವಂತಿಕೆ ಇಲ್ಲದಿದ್ದರೆ ಏನಾಗುತ್ತದೆ ಅನ್ನುವುದಕ್ಕೆ ಒಂದು ಕಥೆ ಹೇಳಿ ಮುಗಿಸಿಬಿಡುತ್ತೇನೆ: ಒಂದು ಹಳ್ಳಿಯಲ್ಲಿ ಹೊಲಗಳಿದ್ದವು. ಅವುಗಳ ಮೇಲೆ ಪಾರಿವಾಳಗಳು ಹಾರಾಡುತ್ತಿದ್ದವು. ಓ!, ಎಂತಹ ಸೊಬಗು. ಪಾರಿವಾಳಗಳು ಕಾಳು ತಿನ್ನುತ್ತವೆ ಎಂದು ಯಾರೋ ದೂರು ಹೇಳಿದರು. ಸರ್ಕಾರದವರು ಪಾರಿವಾಳಗಳನ್ನು ಗುಂಡಿಕ್ಕಿ ಕೊಂದುಬಿಟ್ಟರು! ಕೆಲ ದಿನಗಳ ನಂತರ ನೋಡುತ್ತಾರೆ, ಹೊಲದ ತುಂಬೆಲ್ಲ, ಹುಳುಹುಪ್ಪಟೆಗಳು. ಅವು ಬೆಳೆಯನ್ನೇ ಹಾಳುಮಾಡುತ್ತಿವೆ! ಸರಿ, ಸರ್ಕಾರದವರು ವಿಷ ಇರುವ ಕೀಟನಾಶಕಗಳನ್ನು ಕೊಟ್ಟರು. ಅವುಗಳಿಗೆ ಬೆಲೆ ಜಾಸ್ತಿ. ಅವನ್ನು ಸಿಂಪಡಿಸಿದ್ದರಿಂದ, ಆರೋಗ್ಯ ಹಾಳು. ಕಾಳಿನ ಬೆಲೆಯೂ ಜಾಸ್ತಿ.

ಎಲ್ಲ ಹಾನಿ ಆದನಂತರ ಅವರೆಲ್ಲ ಕಂಡುಹಿಡಿದರು: ಕಾಳು ತಿನ್ನುತ್ತಿದ್ದ ಪಾರಿವಾಳಗಳೇ ಹುಳಗಳನ್ನೂ ತಿನ್ನುತ್ತಿದ್ದವು. ಅದರಿಂದ ಕೀಟನಾಶಕಗಳನ್ನು ಬಳಸಬೇಕಾಗಿರಲಿಲ್ಲ. ಹೀಗಾಗಿ ಧಾನ್ಯ ಆರೋಗ್ಯಕರವಾಗಿರುತ್ತಿತ್ತು ಮತ್ತು ಕಡಿಮೆ ಬೆಲೆಗೂ ಸಿಗುತ್ತಿತ್ತು.

*ತಾತನ ಮುಖದಲ್ಲಿ ಮಂದಹಾಸ. ಮಾತು ಮತ್ತೆ ಬರುತ್ತಿಲ್ಲ. ಮಕ್ಕಳೆಲ್ಲರೂ ಶಬ್ದಮಾಡದೆ ಜಾಗ ಖಾಲಿ ಮಾಡಿದರು. ಅವರು ಅವನನ್ನು ಮತ್ತೆ ನೋಡುವುದು ಮುಂದಿನ ವರ್ಷವೇ. ಅದೂ, ಅಲ್ಲಿಯವರೆಗೆ ಅವನು ಬದುಕಿದ್ದರೆ ಮಾತ್ರ.*

**ಈ ಪ್ರಶ್ನೆಗಳಿಗೆ ನೀವೇ ಉತ್ತರ ಕಂಡುಕೊಳ್ಳಿ: ೧. ನಿತಿನ್ ಏತಕ್ಕೆ ಎರಡನೆ ಸ್ಪರ್ಧೆಯಲ್ಲಿ ಜಯಗಳಿಸಲು ಇಚ್ಛಿಸಲಿಲ್ಲ? ೨. ಜಯರಾಮನ ಮೇಷ್ಟರು ಹೇಳಿದ ಬುದ್ಧಿವಾದ ಯಾವುದು? ೩.ಜಯರಾಮ ನಿಜವಾಗಲೂ ಕುರೂಪಿಯೇ?೪.ಹೃದಯವಂತಿಕೆಗೆ ನಿದರ್ಶನಗಳಾವುವು? ೫. ಪಾರಿವಾಳಗಳನ್ನು ಕೊಂದಿದ್ದರಿಂದ ಆದ ಪರಿಣಾಮವೇನು? (ಮುಂದಿನ ತಿಂಗಳು ಕಲಿಯುವ ಗುಣ: *ಪೌರಪ್ರಜ್ಞೆ ಮತ್ತು ರಾಷ್ಟ್ರೀಯ ಅಭಿಮಾನ*)**

**ಕೃಪೆ:** *How shall I be?*, Pub: Ramakrishna Mission, Belur Math, Howrah WB 711 202 ***(ಭಾವಾನುವಾದ: ಸಂ.)***